ಇದ್ದ ಕಾರಣ ಸರ್ಕಾರಿ ಆದೇಶ ಸಂಖ್ಯೆ :ಪಸಂಮೀ ೧೧೧ ಪಸಸೆ ೧೯೯೯ ದಿನಾಂಕ: ೨೦-೧೧-೨೦೦೦ ರಂತೆ ಹೊಸ ಸಂಸ್ಥೆಗಳನ್ನು ತರೆಯಲು ಅವಕಾಶ ಇರುವುದಿಲ್ಲ.

ಗದಗ ತಾಲ್ಲೂಕಿನಲ್ಲಿ ಪಶುಸಂಗೋಪನೆ ಸೌಲಭ್ಯ ಒದಗಿಸುವ ಸಂಸ್ಥೆಗಳ ಉನ್ನತೀಕರಣ

೩೬೭ (೪೩೯೨) ಶ್ರೀ ಪಾಟೀಲ್ ಡಿ.ಆರ್ (ಗದಗ್) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕಿನಲ್ಲಿ ಪಶು ಸಂಗೋಪನೆಗೆ ಅನುಕೂಲ ಮಾಡುವ ಬೇರೆ ಬೇರೆ ಹಂತದ ವೈದ್ಯಕೀಯ ಸೌಲಭ್ಯ ಒದಗಿಸುವ ಸಂಸ್ಥೆಗಳ ಉನ್ನತೀಕರಣ ಪ್ರಸ್ತಾವನೆಗಳು ಎಷ್ಟು?

ಆ) ಈ ಪ್ರಸ್ತಾವನೆಗಳು ಈಗ ಯಾವ ಹಂತದಲ್ಲಿವೆ?

ಶ್ರೀ ಮೆರಾಜುದ್ದೀನ್ ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಗದಗ ತಾಲ್ಲೂಕಿನಲ್ಲ ಒಟ್ಟು ೨೫ ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಇವೆ. ಇವುಗಳ ವಿವರ ಕೆಳಕಂಡಂತಿದೆ.

ಪಶು ಆಸ್ಪತ್ರೆ	೧
ಪಶುಚಿಕಿತ್ಸಾಲಯ	೧೩
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	೪
ಸಂಚಾರಿ ಪಶು ಚಿಕಿತ್ಸಾಲಯ	೧
ಕೃತಕ ಗರ್ಭಧಾರಣಾ ಕೇಂದ್ರ	೬
ಒಟ್ಟು	೨೫

ಪ್ರಸ್ತುತ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಮಾತ್ರ ಇರುತ್ತದೆ ಹೀಗಾಗಿ ೨೦೦೦-೦೧ನೇ ಸಾಲಿನಿಂದ ಈ ತಾಲ್ಲೂಕಿನ ೭ ಪ್ರಾಥಮಿಕ ಪಶು

ಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗ್ತಿದೆ.

ಆ) ಪ್ರಸಕ್ತ ಸಾಲಿನಲ್ಲಿ ಗದಗ ತಾಲ್ಲೂಕಿನಲ್ಲಿ ಯಾವುದೇ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರದಲ್ಲಿ ಗುಡ್ ಲೈಫ್ ಸ್ಲಿಮ್ ಹಾಲಿನ ದರ ಏರಿಕೆ

೩೬೮ (೩೮೦೧) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪ್ರತಿದಿನ ಸರಾಸರಿ ಖರ್ಚಾಗುವ ಗುಡ್ ಲೈಫ್ ಸ್ಲಿಮ್ ಹಾಲಿನ ಪ್ರಮಾಣ ಎಷ್ಟು;

ಆ) ಈ ಹಾಲು ಟೆಟ್ರಾ ಪ್ಯಾಕ್‌ನಲ್ಲಿ ಬರುತ್ತಿದ್ದು ಇದನ್ನು ಬಹಳ ದಿನ ಕೆಡದಂತೆ ಇಡಬಹುದಾದ್ದರಿಂದ ಹಾಗೂ ಇದು ಕೊಬ್ಬು ರಹಿತ ಹಾಲಾದ್ದರಿಂದ ಇದಕ್ಕೆ ರೋಗಿಗಳು ಹಾಗೂ ಸಾರ್ವಜನಿಕರಿಂದ ಹೆಚ್ಚು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಈ ಹಾಲು ಅರ್ಧ ಲೀಟರ್ ಪ್ಯಾಕ್ನಲ್ಲಿ ಬರುತ್ತಿದ್ದು ಇದರ ಬೆಲೆಯನ್ನು ೯ ರೂ ನಿಂದ ೧೦ರೂ ಗೆ ಏರಿಸಲಾಗಿದೆಯೇ ಈ ರೀತಿ ಲೀಟರಿಗೆ ೨ ರೂ ಏಕಾಏಕಿ ಏರಿಸಲು ಕಾರಣವೇನು;

ಈ) ಟೆಟ್ರಾ ಪ್ಯಾಕಿಗೆ ಬದಲಾಗಿ ಸಾಮಾನ್ಯ ಪ್ಯಾಕ್ನಲ್ಲಿ ಈ ಕೊಬ್ಬುರಹಿತ ಹಾಲನ್ನು ಕಡಿಮೆ ದರದಲ್ಲಿ ನಾಗರಿಕರಿಗೆ ಒದಗಿಸಲು ಸರ್ಕಾರ ಉದ್ದೇಶಿಸಿದೆಯೆ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸರಾಸರಿ ೩,೦೮೦ ಲೀಟರ್ ಗುಡ್ ಲೈಫ್ ಸ್ಲಿಮ್ ಹಾಲಿನ ಮಾರಾಟವಾಗುತ್ತಿದೆ.

ಆ) ಗಮನಕ್ಕೆ ಬಂದಿದೆ.